# ಸಂಸಾರ ಚೆನ್ನಾಗಿರಬೇಕೆ? ಪರಶಿವನ ಮಾತು ಕೇಳಿ

## ಸುಖ ಸಂಸಾರಕ್ಕೆ ಶಿವಸೂತ್ರಗಳು

**ಸ್ಮಶಾನವಾಸಿ, ಪರಮ ವಿರಾಗಿ, ಸದಾ ಧ್ಯಾನಾಸಕ್ತನಾದ ಶಿವ ಸಂಸಾರಸ್ಥನೂ ಹೌದು. ಗಂಗೆ–ಗೌರಿ ಮಡದಿಯರು. ಗಣೇಶ–ಸುಬ್ರಹ್ಮಣ್ಯ ಮಕ್ಕಳು. ಮಡದಿ ಮಕ್ಕಳೊಡನೆ ಶಿವ ನಗುತ್ತಾ ಕುಳಿತಿರುವ ಫ್ಯಾಮಿಲಿ ಫೋಟೊ ಜನಪ್ರಿಯ. ಇಂಥ ಶಿವನನ್ನು ಪಾರ್ವತಿ ಭೂಲೋಕದಲ್ಲಿರುವ ಮನುಷ್ಯರ ಸಂಕಷ್ಟದ ಕಾರಣಗಳ ಕುರಿತು ಬಗೆಬಗೆಯಾಗಿ ಪ್ರಶ್ನಿಸುತ್ತಾಳೆ. ಮನದನ್ನೆಗೆ ತ್ರೈಲೋಕ್ಯನಾಥನಾದ ಶಿವ ಕೊಟ್ಟ ಉತ್ತರವನ್ನು 'ಉಮಾ–ಮಹೇಶ್ವರ ಸಂವಾದ' ಎಂದು ಮಹಾಭಾರತ ಸಂಗ್ರಹಿಸಿಕೊಟ್ಟಿದೆ. ಆ ಸಂವಾದದ ಮುಖ್ಯ ಅಂಶಗಳನ್ನು ಮಾರ್ಚ್ 4ರ 'ಮಹಾಶಿವರಾತ್ರಿ'ಯ ನೆಪದಲ್ಲಿ ನೆನಪಿಸಿಕೊಳ್ಳೋಣ. ಲೋಕದ ಆದಿ ಮಾತಾಪಿತರ ಮಾತುಕತೆ ನಮ್ಮ ಈ ಹೊತ್ತಿನ ಲೌಕಿಕಕ್ಕೂ ಹೊಂದುವಂತಿದೆ.**

■ **ಡಿ.ಎಂ.ಘನಶ್ಯಾಮ**



ಒಂದು ದಿನ ಶಿವಪ್ಪನು ತನ್ನ ಮನದೊಡತಿ ಪಾರ್ವತಿಯ ಕೈಹಿಡಿದು ಲೋಕಲೋಕಗಳನ್ನು ತಿರುಗಾಡುತ್ತಾ ಭೂಲೋಕಕ್ಕೂ ಬಂದ. ಮಾನವ ಶರೀರ ಹೊತ್ತ ತನ್ನ ಮಕ್ಕಳು ಅನುಭವಿಸುತ್ತಿದ್ದ ಹತ್ತಾರು ಬಗೆಯ ಕಷ್ಟಗಳನ್ನು ಕಂಡು ಪಾರ್ವತಿಯ ತಾಯಿಕರುಳು ಚುರುಕ್ ಅಂದು, 'ಏನೋ ಒಂದು ಕೇಳಬೇಕಿತ್ತು' ಎಂಬಂತೆ ಗಂಡನನ್ನೊಮ್ಮೆ ನೋಡಿದಳು. 'ಅಮ್ಮೋರ ಮನಸ್ಸಿಗೆ ಬಂದ ಮೇಲೆ ಮುಗಿಯಿತು' ಎಂದು ಇಷ್ಟುವರ್ಷ ಸಂಸಾರ ನಡೆಸಿದ್ದ ಪರಶಿವನಿಗೆ ಅರ್ಥವಾಗಿರಲಿಲ್ಲವೇ? 'ಕೇಳಿಬಿಡು, ನನ್ಹತ್ರ ಏನು ಸಂಕೋಚ' ಎಂದು ಮುಗುಳ್ನಕ್ಕ.

'ಅಲ್ಲ ಕಣ್ರೀ, ಇಲ್ಲಿರೋರೆಲ್ಲಾ ನಮ್ಮ ಮಕ್ಕಳೇ ತಾನೆ? ಅವನ ಹತ್ತಿರ ದುಡ್ಡಿಲ್ಲ, ಆದರೆ ನೆಮ್ಮದಿಯಿದೆ. ಇವನ ಹತ್ತಿರ ದುಡ್ಡು ಇದೆ, ನೆಮ್ಮದಿ ಇಲ್ಲ. ಅವಳ ಹತ್ತಿರ ದುಡ್ಡು–ನೆಮ್ಮದಿ ಎರಡೂ ಇದೆ. ಇವಳ ಹತ್ತಿರ ದುಡ್ಡು–ನೆಮ್ಮದಿ ಎರಡೂ ಇಲ್ಲ. ಯಾಕ್ರೀ ಇಷ್ಟೆಲ್ಲಾ ವಿಚಿತ್ರ ಮಾಡಿಟ್ಟಿದ್ದೀರಿ. ಇವನ ಕಡೆ ನೋಡ್ರೀ, ಕಾರಣವೇ ಇಲ್ಲದೆ ಸಿಡುಕ್ತಾನೆ. ಅವನ ಕಡೆ ನೋಡ್ರೀ, ಕಾರಣವೇ ಇಲ್ಲದೆ ಹೆದರಿ ಸಾಯ್ತಿದ್ದಾನೆ. ಮಕ್ಕಳು ನೆಮ್ಮದಿಯಾಗಿರಲಿ ಅಂತ ತಾನೆ ಎಲ್ಲ ತಾಯಂದಿರೂ ಬಯಸೋದು. ನನ್ನನ್ನು ಜಗತ್ತಿನ ತಾಯಿ ಅಂತಾರೆ. ಆದ್ರೆ ನನ್ನ ಮಕ್ಕಳ ಕಥೆ ನೋಡಿದ್ರೆ ಹೀಗಾಗಿದೆ...' ಎಂದು ಬೇಸರ ತೋಡಿಕೊಂಡಳು.

'ಅಯ್ಯೋ ನನ್ನ ಪಾರ್ವತಿ, ನಿನಗೆ ಎಲ್ಲವೂ ಗೊತ್ತು, ಎಲ್ಲರ ಕಥೆಯೂ ಗೊತ್ತು. ಹೀಗಿದ್ದೂ ಇದೇನು ಹೊಸ ನಾಟಕ ಹೂಡಿದ್ದೀಯೇ? ನಿನ್ನ ಮಗ ಬರೆದುಕೊಳ್ತಿರೋ ಮಹಾಭಾರತಕ್ಕೆ ನಮ್ಮಿಬ್ಬರ ಸಂವಾದದಂಥ ಸಲ್ಲಾಪವೂ ಸೇರಿಕೊಳ್ಳಲಿ ಅಂತಾನಾ...' ಅಂದು ಶಿವಪ್ಪ ಮಾತಿಗೆ ಶುರುವಿಟ್ಟುಕೊಂಡ.

***

'ದೇಶ ಚೆನ್ನಾಗಿರಬೇಕು ಅಂದ್ರೆ, ದೇಶದ ಜನರು ನೆಮ್ಮದಿಯಾಗಿರಬೇಕು ಅಂದ್ರೆ ರಾಜ ಯೋಗ್ಯನಾಗಿರಬೇಕು, ವಿನಯಶಾಲಿಯಾಗಿರಬೇಕು. ರಾಜನನ್ನು ಜನರು ಆದರ್ಶವೆಂದು ಭಾವಿಸಿ ಅವನ ನಡವಳಿಕೆಯನ್ನು ಅನುಸರಿಸಲು ಯತ್ನಿಸುತ್ತಾರೆ. ವೃಷಭನಾಮಕ ಪರಮಾತ್ಮ ದೇಶವನ್ನು ಸುಧಾರಿಸುವ ಮೊದಲು ತನ್ನ ಮಕ್ಕಳನ್ನು ಸುಧಾರಿಸಲು ಯತ್ನಿಸಿದ ಪ್ರಸಂಗವನ್ನು ಒಮ್ಮೆ ನೆನಪಿಸಿಕೊ. ಮೊದಲು ರಾಜ ತನ್ನ ಮಿತಿ, ದೌರ್ಬಲ್ಯಗಳನ್ನು ಅರಿತುಕೊಂಡು ಅವುಗಳಿಂದ ಹೊರಗೆ ಬರಲು ಪ್ರಯತ್ನಿಸಬೇಕು. ತನ್ನನ್ನು ತಾನು ತಿದ್ದಿಕೊಳ್ಳದ ರಾಜ ಪ್ರಜೆಗಳನ್ನು ತಿದ್ದಲು ಪ್ರಯತ್ನಿಸಿದರೆ ಅಪಹಾಸ್ಯಕ್ಕೆ ಪಾತ್ರನಾಗುತ್ತಾನೆ. ವಿಪರೀತ ಸಿಟ್ಟು, ಕಂಡದ್ದೆಲ್ಲ ಬೇಕು ಎನ್ನುವ ಆಸೆ, ಪರಸ್ತ್ರೀಯರಲ್ಲಿ